ಟಿ20 ಪಂದ್ಯಗಳನ್ನು ಮಾತ್ರ. ಎರಡೂ ಮಾದರಿಗಳಲ್ಲಿ ತಲಾ 3 ವಿಕೆಟ್ ಗಳಿಸಿರುವುದಷ್ಟೇ ಅವರ ಸಾಧನೆ. ಆದರೂ ಆರ್‌ಸಿಬಿ ಅವರನ್ನು ಇಷ್ಟು ದೊಡ್ಡ ಮೊತ್ತಕ್ಕೆ ಹೇಗೆ ಖರೀದಿಸಿತು ಎಂಬ ಪ್ರಶ್ನೆ ಮೂಡಿತು.

ಏನೇ ಆಗಲಿ, ಮಿನಿ ಹರಾಜಿನಲ್ಲಿ ಆರ್‌ಸಿಬಿ ಫ್ರಾಂಚೈಸಿಯ ಚಿಂತಕರ ಚಾವಡಿಯು ಪ್ರಜ್ಞಾಪೂರ್ವಕವಾಗಿ ಮಂಗೇಶ್ ಅವರನ್ನು ಖರೀದಿಸಿದ್ದಂತೂ ನಿಜ. ಏಕೆಂದರೆ, ಪ್ರಸಕ್ತ ಐಪಿಎಲ್ ಋತುವಿನಲ್ಲಿ ತಂಡಕ್ಕೆ ಎಡಗೈ ವೇಗಿ ಯಶ್ ದಯಾಳ್ ಅವರು ಅಲಭ್ಯವಾಗುವ ಸಾಧ್ಯತೆಯನ್ನು ತಂಡವು ಮನಗಂಡಿತ್ತು ಎಂಬುದನ್ನು ಈಚೆಗೆ ಆರ್‌ಸಿಬಿಯ ಕ್ರಿಕೆಟ್ ನಿರ್ದೇಶಕ ಮೊ ಬೊಬಾಟ್ ಅವರೇ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು. ಪೋಕ್ಸೊ ಪ್ರಕರಣ ಎದುರಿಸುತ್ತಿರುವ ಯಶ್ ಅವರ ಸ್ಥಾನದಲ್ಲಿ ಮಂಗೇಶ್ ಬೌಲಿಂಗ್ ಮಾಡುವುದು ಬಹುತೇಕ ಖಚಿತವಾಗಿದೆ. ಆರ್‌ಸಿಬಿ ಇಟ್ಟಿರುವ ವಿಶ್ವಾಸವನ್ನು ಅವರು ಹೇಗೆ ಉಳಿಸಿಕೊಳ್ಳುತ್ತಾರೆಂಬುದೇ ಈಗ ಕುತೂಹಲ.

ತಾವು ನಡೆದು ಬಂದ ಹಾದಿ, ಪಟ್ಟ ಪರಿಶ್ರಮಕ್ಕೆ ಈಗ ಅವಕಾಶ ಒಲಿದುಬಂದಿರುವುದರ ಅರಿವು ಅವರಿಗೆ ಚೆನ್ನಾಗಿದೆ. ಅದರಲ್ಲೂ ತಂದೆ ಪಟ್ಟ ಕಷ್ಟಗಳನ್ನು ಅವರು ಬಲ್ಲರು.

‘ಟ್ರಕ್ ಚಾಲಕನ ಬದುಕು ಬದುಕೇ ಅಲ್ಲ. ಏಕೆಂದರೆ ನಮಗೆ ಚಾಲನೆ ಮಾಡುವಾಗ ಯಾವುದರ ಪರಿವೆಯೂ ಇರುವುದಿಲ್ಲ. ಚೆನ್ನಾಗಿ ಊಟ ಮಾಡುವ ಅಥವಾ ಕೊನೆ ಪಕ್ಷ ಸ್ನಾನ ಮಾಡುವ ಅವಕಾಶಗಳೂ ಕಮ್ಮಿ. ಟ್ರಕ್‌ನಲ್ಲಿ ಸಾಗಿಸುವ ಸರಂಜಾಮುಗಳನ್ನು ಸುರಕ್ಷಿತವಾಗಿ ಮತ್ತು ಸರಿಯಾದ ಸಮಯಕ್ಕೆ ನಿಗದಿತ ಸ್ಥಳಕ್ಕೆ ತಲುಪಿಸುವತ್ತಲೇ ನಮ್ಮ ಗಮನ ಇರುತ್ತದೆ. ಅಷ್ಟೇ ಅಲ್ಲ. ಒಂದು ಹಾದಿಯಲ್ಲಿ ಸಾಗಿ ಗುರಿ ಮುಟ್ಟಿ ಲೋಡ್ ಇಳಿಸಿದ ನಂತರ, ಮರಳುವಾಗ ಮತ್ತೆ ಹೊಸ ಸರಂಜಾಮುಗಳನ್ನು ಲೋಡ್ ಮಾಡಿಕೊಂಡು ಬರುವ ಚಿಂತೆಯೂ ಇರುತ್ತದೆ’ ಮಂಗೇಶ್ ತಂದೆ ರಾಮ ಅವಧ್ ಅವರು ಈಚೆಗೆ ‘ಆರ್‌ಸಿಬಿ ಡೈರೀಸ್’ ವಿಡಿಯೊದಲ್ಲಿ ಹೇಳಿದ್ದರು.

ಅಪ್ಪನಿಗೆ ಹೆಚ್ಚು ಆರ್ಥಿಕ ಹೊರೆ ಹಾಕಲು ಹಿಂಜರಿಯುತ್ತಿದ್ದ ಮಂಗೇಶ್, ಟೆನಿಸ್ ಬಾಲ್ ಟೂರ್ನಿಗಳಲ್ಲಿ ಆಡಿ ಒಂದಿಷ್ಟು ಹಣ ಸಂಪಾದಿಸುತ್ತಿದ್ದರು. ಆ ಟೂರ್ನಿಗಳಲ್ಲಿ ಆಡಲು ಮಧ್ಯಪ್ರದೇಶ ಮತ್ತು ಛತ್ತೀಸಗಡಕ್ಕೆ ರೈಲ್ವೆಯ ಸಾಮಾನ್ಯ ಬೋಗಿಗಳ ನೂಕುನುಗ್ಗಲಿನಲ್ಲಿ ಪ್ರಯಾಣಿಸುತ್ತಿದ್ದರು.

16ನೇ ವಯಸ್ಸಿನಲ್ಲಿ ಅವರಿಗೆ ಕ್ರಿಕೆಟ್‌ನ ಸರಿಯಾದ ಮಾರ್ಗದರ್ಶನ ಲಭಿಸಿತು. ವೃತ್ತಿಪರತೆಯತ್ತ ಮೊದಲ ಹೆಜ್ಜೆ ಇಟ್ಟರು. ವಂಡರ್ ಕ್ರಿಕೆಟ್ ಕ್ಲಬ್‌ನ ಕೋಚ್ ಫೂಲ್‌ಚಂದ್ ಶರ್ಮಾ ಅವರು ಮಂಗೇಶ್ ಪ್ರತಿಭೆಯನ್ನು ಗುರುತಿಸಿದರು. ತಮ್ಮ ವಸತಿ ನಿಲಯದಲ್ಲಿ ಉಚಿತ ಪ್ರವೇಶ ಕೊಟ್ಟರು. ಮೂರು ವರ್ಷಗಳವರೆಗೆ ಯಾವುದೇ ಶುಲ್ಕ ಪಡೆಯಲಿಲ್ಲ. ‘ಶರ್ಮಾ ಸರ್ ಅವರ ಬೆಂಬಲವಿಲ್ಲದೇ ನಾನು ಇಲ್ಲಿಯವರೆಗೆ ಬೆಳೆಯಲು ಆಗುತ್ತಿರಲಿಲ್ಲ’ ಎಂದು ಸ್ವತಃ ಮಂಗೇಶ್ ಹೇಳಿಕೊಂಡಿದ್ದಾರೆ.

‘ನಾನು ದೆಹಲಿಗೆ ಕ್ಲಬ್ ಸೇರಲು ಹೋಗುವಾಗ ಅಪ್ಪ ಬಹಳ ಕಷ್ಟಪಟ್ಟು ₹ 24 ಸಾವಿರ ಹೊಂದಿಸಿಕೊಟ್ಟಿದ್ದರು. ಒಂದೇ ತಿಂಗಳಲ್ಲಿ ಆ ದುಡ್ಡು ಯಾವ ರೀತಿ ಖರ್ಚಾಗಿ ಹೋಯಿತು ಎಂಬುದೇ ನನಗೆ ಗೊತ್ತಾಗಲಿಲ್ಲ.




ಆ ಸಂದರ್ಭದಲ್ಲಿ ಫೂಲ್‌ಚಂದ್ ಸರ್ ನನ್ನ ಕೈಹಿಡಿದರು’ ಎಂದು ಮಂಗೇಶ್ ನೆನಪಿಸಿಕೊಳ್ಳುತ್ತಾರೆ.

ಕಳೆದ ವರ್ಷ ಮಧ್ಯಪ್ರದೇಶ ಟಿ20 ಲೀಗ್ ಕ್ರಿಕೆಟ್ ಟೂರ್ನಿ ನಡೆದಾಗ ಮಂಗೇಶ್ ಅವರು ಗ್ವಾಲಿಯರ್ ಚೀತಾ ತಂಡದಲ್ಲಿ ಆಡಿದ್ದರು. ಒಟ್ಟು 14 ವಿಕೆಟ್ ಗಳಿಸಿ ಟೂರ್ನಿಯ ಆಟಗಾರ ಗೌರವ ಗಳಿಸಿದ್ದರು.

ಐಪಿಎಲ್ ಟೂರ್ನಿ ಮುಂಬೈ ಇಂಡಿಯನ್ಸ್, ಡೆಲ್ಲಿ ಕ್ಯಾಪಿಟಲ್ಸ್, ರಾಜಸ್ಥಾನ ರಾಯಲ್ಸ್ ಮತ್ತು ಆರ್‌ಸಿಬಿ ತಂಡಗಳ ಪ್ರತಿಭಾಶೋಧ ಶಿಬಿರಗಳಲ್ಲಿ ಭಾಗವಹಿಸಲು ಆಹ್ವಾನಗಳು ಅವರಿಗೆ ಬಂದವು. ಕಳೆದ ಋತುವಿನ ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಮಧ್ಯಪ್ರದೇಶ ತಂಡದಲ್ಲಿ ಪದಾರ್ಪಣೆ ಮಾಡಿದರು. ಪಂಜಾಬ್ ಎದುರಿನ ಪಂದ್ಯದಲ್ಲಿ 12 ಎಸೆತಗಳಲ್ಲಿ 28 ರನ್ ಗಳಿಸಿದರು. ಆರ್‌ಸಿಬಿಯ ಮೆಂಟರ್ ದಿನೇಶ್ ಕಾರ್ತಿಕ್ ಅವರು ಮಂಗೇಶ್ ಅವರನ್ನು ಬೌಲಿಂಗ್ ಮತ್ತು ಬ್ಯಾಟಿಂಗ್ ಎರಡನ್ನೂ ಪರೀಕ್ಷೆಗೊಡ್ಡಿದರು. ಹೊಸ ಚೆಂಡು ಮತ್ತು ಡೆತ್ ಓವರ್‌ಗಳಲ್ಲಿ ಅವರ ಬೌಲಿಂಗ್ ಪರೀಕ್ಷಿಸಿದರು. ಮಂಗೇಶ್ ಸೈ ಎನಿಸಿಕೊಂಡರು. ಇದೀಗ ಆರ್‌ಸಿಬಿ ಜೆರ್ಸಿ ತೊಟ್ಟುಕೊಂಡು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದ್ದಾರೆ. ದಿಗ್ಗಜ ವಿರಾಟ್ ಕೊಹ್ಲಿ, ವೇಗಿ ಭುವನೇಶ್ವರ್ ಕುಮಾರ್, ಸ್ಪಿನ್ನರ್ ಕೃಣಾಲ್ ಪಾಂಡ್ಯ, ಇಂಗ್ಲೆಂಡ್‌ನ ಫಿಲ್ ಸಾಲ್ಟ್, ಜಿತೇಶ್ ಶರ್ಮಾ ಅವರಂತಹ ನುರಿತ ಆಟಗಾರರೊಂದಿಗೆ ಡ್ರೆಸಿಂಗ್ ರೂಮ್ ಹಂಚಿಕೊಂಡಿದ್ದಾರೆ. ಕೋಚ್ ಆ್ಯಂಡಿ ಫ್ಲವರ್ ಮಾರ್ಗದರ್ಶನದಲ್ಲಿ ಐಪಿಎಲ್‌ನಲ್ಲಿ ಹೆಜ್ಜೆಗುರುತು ಮೂಡಿಸುವತ್ತ ಚಿತ್ತ ನೆಟ್ಟಿದ್ದಾರೆ. ನಂತರ ಭಾರತ ತಂಡಕ್ಕೂ ಲಗ್ಗೆ ಹಾಕುವ ಗುರಿ ಅವರದ್ದು.

